**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 16.11.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿಯರ ಪರವಾಗಿ ಶ್ರೀ. ಎಲ್.ಎಸ್.ಡಿ. ವಕೀಲರಿಂದ.**

ಭಂಟೂರು ಗ್ರಾಮದ ಜಮೀನು ಸರ್ವೆ ನಂ. 66/1 ರ ಜಮೀನು ನೀರಾವರಿ ಜಮೀನು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ದಾಖಲೆಯಲ್ಲಿ ಸರ್ವೆ ನಂ. 66/1 ರ ಜಮೀನು ಖುಷ್ಕಿ ಜಮೀನು ಅಂತ ಬರೆದಿರುವರು ಎಂದರೆ ಸರಿ. ನಿಪಿ-2 ರ ದಾಖಲೆಯಲ್ಲಿ ನಮ್ಮ ಪಾಲಿಗೆ 2 ಎಕರೆ 21 ಗುಂಟೆ ಜಮೀನು, ಪ್ರತಿವಾದಿ 1 ರವರ ಹೆಸರಿನಲ್ಲಿ 3 ಎಕರೆ ಜಮೀನು ಅಂತ ದಾಖಲೆ ಇರುವದು ಎಂದರೆ ಸರಿ. ಅದು ಖೊಟ್ಟಿಯಾಗಿರುವದು ಎಂದು ಸಾಕ್ಷಿ ಉತ್ತರಿಸಿರುವರು. ಈ ಜಮೀನಿನಲ್ಲಿ 2 ಎಕರೆ 21 ಗುಂಟೆ ನಾನು ಸಾಗುವಳಿ ಮಾಡುತ್ತಿದ್ದೇನೆ. ಉಳಿದ ಜಮೀನನ್ನು ಪ್ರತಿವಾದಿ 1 ರವರು ಕೇವಲ 28 ಗುಂಟೆ ಜಮೀನನ್ನು ಮಾತ್ರ ಸಾಗುವಳಿ ಮಾಡುತ್ತಾರೆ ಎಂದು ಸಾಕ್ಷಿ ಉತ್ತರಿಸಿರುವರು. ಈ ಸರ್ವೆ ನಂಬರಿನ ಒಟ್ಟು ವಿಸ್ತೀರ್ಣದ ಜಮೀನು ನಮ್ಮ ಕಬ್ಜೆಯಲ್ಲಿರುವ ಬಗ್ಗೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂ. 66/1 ರ ಜಮೀನಿನ 3 ಎಕರೆ ಜಮೀನನ್ನು ಪ್ರತಿವಾದಿ 1 ರವರೇ 2004 ರಿಂದ ಕಬ್ಜೆಯನ್ನು ಹೊಂದಿ ಸಾಗುವಳಿ ಮಾಡಿಕೊಂಡು ಬಂದಿರುವರು ಎಂದರೆ ಸರಿಯಲ್ಲ.

ಈ ದಾವೆ ದಾಖಲು ಮಾಡಲು ವಕೀಲರಿಗೆ ನಾವೇ ಮಾಹಿತಿ ನೀಡಿರುವೇವು. 2003 ರಲ್ಲಿ ಪ್ರತಿವಾದಿಯರ ದಾವಾ 12/6 ಮತ್ತು 12/9 ರ ಜಮೀನುಗಳನ್ನು ಖರೀದಿ ಮಾಡುವುದಾಗಿ ಎಂದು ಹೇಳಿ ಅವರು ನಮ್ಮ ಹತ್ತಿರ ಬಂದಿರುವ ಬಗ್ಗೆ ವಾದಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಸರ್ವೆ 12/6 ಮತ್ತು 12/9 ರ ಜಮೀನಿಗೆ ಸಂಬಂಧಪಟ್ಟಂತೆ ರೂ.336000/- ಗಳಿಗೆ ಮಾರಾಟ ಮಾಡುವುದಾಗಿ ಒಪ್ಪಿ ದಿನಾಂಕಃ 21.11.2003 ರಂದು ಖರೀದಿ ಕರಾರುಪತ್ರ ಪ್ರತಿವಾದಿಯರಿಗೆ ಬರೆದುಕೊಟ್ಟಿರುವುದಾಗಿ ಎಂದು ಹೇಳಿ ವಾದಪತ್ರದಲ್ಲಿ ಬರೆಸಿ ಹಾಕಿರುವುದಿಲ್ಲ. ದಿನಾಂಕಃ 04.08.2004 ರಂದು ಪ್ರತಿವಾದಿಯರು ನಮ್ಮ ಹತ್ತಿರ ಬಂದು ಖರೀದಿ ಪತ್ರ ನೋಂದಣಿ ಮಾಡಿಕೊಡವಂತೆ ನಮ್ಮಹತ್ತಿರ ಬಂದು ಕೇಳಿರುವರು. ಪ್ರತಿವಾದಿ 1 ಮತ್ತು 2 ರವರು ನಮ್ಮ ಹತ್ತಿರ

ಬಂದು ಕೇಳಿರುವರು. ಈ ಇಬ್ಬರನ್ನು ಹೊರತುಪಡಿಸಿ ಬೇರೆ ಯಾರೂ ಬಂದಿರುವುದಿಲ್ಲ. ಇವರು ಭಂಟೂರು ಗ್ರಾಮಕ್ಕೆ ಬಂದು ಕೇಳಿರುವರು. ನಮ್ಮಕಿಂತಲೂ ಮುಂಚೆ ಪ್ರತಿವಾದಿಯರು ಮುಧೋಳದ ಉಪನೊಂದಣಿ ಕಚೇರಿಗೆ ಬಂದಿರುವರು.

ಮುಧೋಳಕ್ಕೆ ನಾವು ಬಂದಾಗ ಸಮಯ ಮದ್ಯಾಹ್ನ ಸುಮಾರು 12.00 ಗಂಟೆಯಾಗಿರಬಹುದು. ನಮ್ಮನ್ನು ತಹಶೀಲ್ದಾರ ಕಚೇರಿಗೆ ಕರೆದಿರುವರು,ಆದರೆ ನಿರ್ಧಿಷ್ಟವಾಗಿ ಎಲ್ಲಿಗೆ ಎಂದು ನನಗೆ ಗೊತ್ತಿರುವುದಿಲ್ಲ. ಅಲ್ಲಿ ಪ್ರತಿವಾದಿ 1 ಮತ್ತು 2 ಇಬ್ಬರು ಹಾಜರಿದ್ದರು. ಪ್ರತಿವಾದಿಯರ ಜೊತೆ ಬೇರೆ ಇದ್ದ ವ್ಯಕ್ತಿಗಳ ಹೆಸರು ನನಗೆ ಗೊತ್ತಿರುವುದಿಲ್ಲ. ನಮ್ಮ ತಂದೆಯವರ ಮರಣದ ನಂತರ ಮನೆತನದ ವ್ಯವಹಾರಗಳನ್ನು ನಾವು 5 ಜನರೂ ಮಾಡುತ್ತೇವೆ. ಈ ಜಮೀನಿನ ಮೇಲೆ ಸಾಲ ಪಡೆಯುವ ದಾಖಲೆ ಮೇಲೆ ನಾವು 5 ಜನರೂ ಸಹಿ ಮಾಡುತ್ತೇವೆ. ಸರ್ವೇ ನಂ. 12/9 ರ ಜಮೀನಿಗೆ ಸಂಬಂಧಪಟ್ಟಂತೆ ಸಾಲದ ವ್ಯವಹಾರ ನಾವು 5 ಜನರೂ ಕೂಡಿಕೊಂಡು ಮಾಡಿರುವೇವು. ಸರ್ವೇ ನಂ. 12/9 ಮತ್ತು 66/1 ರ ಜಮೀನಿಗೆ ಸಂಬಂಧಪಟ್ಟಂತೆ ನಾನು ಉಳಿದ ವಾದಿ ಮತ್ತು ಪ್ರತಿವಾದಿಯರ ಮದ್ಯೆ ನಮ್ಮ ಊರಿನಲ್ಲಿ ಮಾತುಕತೆಯಾಗಿದೆ ಎಂದರೆ ಸರ್ವೇ ನಂ. 12/6 ಮತ್ತು 12/9 ರ ಜಮೀನಿನ ಬಗ್ಗೆ ಮಾತುಕತೆಯಾಗಿರುವದು, ಸರ್ವೇ ನಂ. 66/1 ರ ಜಮೀನಿನ ಮಾತುಕತೆಯಾಗಿರುವುದಿಲ್ಲ.

ಆ ದಿನ ಮುಧೋಳದ ದಸ್ತೂರು ಬರಹಗಾರ ತೆಗ್ಗಿ ಅವರ ಕಚೇರಿಗೆ ಮುಂಜಾನೆ 09.00 ಗಂಟೆಗೆ ನಾವೆಲ್ಲಾ ಹಾಜರಿದ್ದೇವು ಎಂದರೆ ಸರಿಯಲ್ಲ. ಆ ದಿನ 11-12 ಗಂಟೆಗೆ ಬಂದಿರುವೇವು ಎಂದು ಉತ್ತರಿಸಿರುವರು. ಆ ದಿನ ವಾದಿ 4 ದಾವಾ ಜಮೀನುಗಳ ಪಹಣಿ ಪತ್ರಿಕೆಗಳನ್ನು ದಸ್ತೂರು ಬರಹಗಾರರಿಗೆ ನೀಡಿರುವರು ಎಂದರೆ ಸರಿಯಲ್ಲ. ಆ ಪ್ರಕಾರ ದಸ್ತೂರು ಬರಹಗಾರ ಖರೀದಿ ಕರಾರು ಪತ್ರವನ್ನು ತಯಾರಿಸಿ ಅದನ್ನು ಎಲ್ಲರಿಗೂ ಓದಿ ಹೇಳಿರುವರು ಎಂದರೆ ಸರಿಯಲ್ಲ. ಖರೀದಿ ಪತ್ರದ ಮೇಲೆ ಸಾಕ್ಷಿದಾರರು ಅಂತ ಸಹಿ ಮಾಡಿರುವ ಎಲ್.ಕೆ. ಅಮ್ಮಲಜರಿ ಮತ್ತು ಜಿ.ಆರ್. ಸಿಂಗರಡ್ಡಿ ಎಂಬುವವರನ್ನು ವಾದಿ 4 ರವರೇ ಕರೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ದಿನಾಂಕಃ 23.08.2004 ರಂದು ದಾವಾ ಜಮೀನುಗಳನ್ನು ಪ್ರತಿವಾದಿ 1 ರವರಿಗೆ ನಮ್ಮ ತಿಳುವಳಿಕೆಯಿಂದಲೇ ಮಾರಾಟ ಮಾಡುವುದಾಗಿ ಖರೀದಿ ಪತ್ರ ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

ದಿನಾಂಕಃ 23.08.2004 ರಂದು ಖೊಟ್ಟಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದು ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಬರೆದಿರುವುದಿಲ್ಲ. ಈ ಖರೀದಿ ಪತ್ರ ಆದ ದಿನದಿಂದ ಪ್ರತಿವಾದಿ 1 ರವರೇ ದಾವಾ ಜಮೀನಿನ ಕಂದಾಯ ದಾಖಲೆಗಳಲ್ಲಿ ಹಕ್ಕು ಬದಲಾವಣೆ ಮಾಡಿಕೊಂಡು ಬಂದ 2004 ರಿಂದ ಸಾಗುವಳಿ ಮಾಡಿಕೊಂಡು ಬಂದಿರುವರು ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು 28 ಗುಂಟೆ ಜಮೀನನ್ನು ಸಾಗುವಳಿ ಮಾಡಿಕೂಂಡು ಬಂದಿದ್ದು, ಉಳಿದ ಜಮೀನು ನಮ್ಮ ಕಬ್ಜೆಯಲ್ಲಿರುವದು ಎಂದು ಉತ್ತರಿಸಿರುವರು. ಪ್ರತಿವಾದಿ 1 ರವರು 28 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ರೂ.336600/- ಗಳನ್ನು ನೀಡಿರುವರು. ಈ ಹಣ ವಾದಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ನಗದು ರೂಪದಲ್ಲಿ ಈ ಹಣ ನೀಡಿರುವರು. ಪ್ರತಿವಾದಿ 1 ರವರು 3 ಎಕರೆ 5 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಖೊಟ್ಟಿ ದಾಖಲೆ ಸೃಷ್ಟಿ ಮಾಡಿಕೊಂಡಿರುವರು, ಏಕೆಂದರೆ ನಾವು ಅನಕ್ಷರಸ್ಥರು ಇರುವೇವು.

ಪ್ರತಿವಾದಿ 1 ರವರು 3 ಎಕರೆ 5 ಗುಂಟೆ ಜಮೀನನ್ನು ತಮ್ಮ ಹೆಸರಿನಲ್ಲಿ ಖೊಟ್ಟಿಯಾಗಿ ದಾಖಲು ಮಾಡಿಕೊಂಡಿರುವರು, ಆದರೆ ಆ ಜಮೀನು ನಮ್ಮ ಕಬ್ಜೆಯಲ್ಲಿರುವುದು. ಈ ಖೊಟ್ಟಿ ದಾಖಲೆ ಮಾಡಿಕೊಂಡಿರುವ ಬಗ್ಗೆ ಪೋಲೀಸ ಠಾಣೆಯಲ್ಲಿ ದೂರು ದಾಖಲು ಮಾಡಿರವುದಿಲ್ಲ. ಆದರೆ ಈ ದಾವೆ ದಾಖಲು ಮಾಡಿರುವೇವು. ಪೋಲೀಸ ಠಾಣೆಯಲ್ಲಿ ದೂರ ದಾಖಲು ಮಾಡಿದರೆ ನಿಜಸಂಗತಿ ಗೊತ್ತಾಗುತ್ತದೆಂಬ ಕಾರಣಕ್ಕೆ ಈ ದೂರು ದಾಖಲು ಮಾಡಿರುವುದಿಲ್ಲ. ದಾವಾ ಜಮೀನುಗಳು ಪ್ರತಿವಾದಿಯರ ಕಬ್ಜೆಯಲ್ಲಿದ್ದು ಆದರೂ ಸಹಿತ ಈ ಪ್ರತಿವಾದಿಯರು ಈ ದಾವಾ ಆಸ್ತಿಗಳ ನಮ್ಮ ಸ್ವಾಧೀನಾನುಭವಕ್ಕೆ ಅಡತಡೆಯನ್ನುಂಟು ಮಾಡಿರುವರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ಈ ಖೊಟ್ಟೆಯಾದ ದಾಖಲೆಯನ್ನು ಸೃಷ್ಟಿ ಮಾಡಿ ಈ ದಾವಾ ಆಸ್ತಿಯು ನಮ್ಮ ಸ್ವಾಧೀನಾನುಭವಕ್ಕೆ ಅಡತಡೆಯುಂಟುಮಾಡಿರುವರು. ಈ ಅಡತಡೆ ಮಾಡಿದ ಬಗ್ಗೆ ಪೋಲೀಸ ಠಾಣೆಯಲ್ಲಿ ಪ್ರತಿವಾದಿಯರ ವಿರುದ್ಧ ದೂರು ದಾಖಲು ಮಾಡಿರುವುದಿಲ್ಲ.

ನಿಪಿ-4 ರ ದಾಖಲಾತಿ 2004 ರಿಂದ ನಮ್ಮ ಹತ್ತಿರ ಇತ್ತು ಎಂದರೆ ಸರಿ. ಈ ದಾವೆಯಲ್ಲಿ ಸರ್ವೇ ನಂ. 12/9 ರ ಬದಲು ಸರ್ವೇ ನಂ. 66/1 ರ ಜಮೀನು ಎಂದು ಬರೆದಿರುವರು ಎಂದರೆ

ಅದು ಖೊಟ್ಟಿಯಾಗಿ ಮಾಡಿರುವರು ಎಂದು ಉತ್ತರಿಸಿರುವರು. ಪ್ರತಿವಾದಿಯರು ಖೊಟ್ಟಿ ದಾಖಲೆಯನ್ನು ಮಾಡಿಕೊಂಡು 9 ವರ್ಷವಾಗಿದ್ದು ನಂತರ ನನಗೆ ಗೊತ್ತಾಗಿರುವುದು. ನಂತರ ಪ್ರತಿವಾದಿಯರ ಮನೆಗೆ ಹೋಗಿ ನಾವು ವಿಚಾರಿಸಿರುವೇವು. ಸರ್ವೇ ನಂ. 12/9 ರ ಜಮೀನು ಮಾರಾಟ ಮಾಡುವುದಾಗಿ ಒಪ್ಪಿಕೊಂಡಿರುವೇವು. ಈ ಜಮೀನಿನ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಯರ ಹೆಸರು ದಾಖಲಾಗದಿರುವ ಬಗ್ಗೆ ನಾವು ಪ್ರತಿವಾದಿಯರಲ್ಲಿ ವಿಚಾರಿಸಿರುವುದಿಲ್ಲ. ಆದರೆ 28 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ಮಾತ್ರ ಖರೀದಿ ಮಾಡಿರುವೇವು ಎಂದು ಹೇಳಿರುವರು. ಪ್ರತಿವಾದಿಯರು ಯಾವುದೇ ರೀತಿಯಿಂದ ಮೋಸ ಮಾಡದೇ ಇದ್ದರೂ ಸಹಿತ ಮಾರಾಟ ಮಾಡಿದ ಜಮೀನನ್ನು ಮರಳಿ ಕಬಳಿಸುವ ಸಲುವಾಗಿ ಈ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ

ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ